## "ಹಂಪನಾ" – ನಾ ಕಂಡಂತೆ.

**"ಹಂಪನಾ"** ಎಂದೇ ಪ್ರಸಿದ್ಧರಾಗಿರುವ ಶ್ರೀ ಹಂಪ ನಾಗರಾಜಯ್ಯನವರನ್ನು ನಾನು ನನ್ನ ವಿದ್ಯಾರ್ಥಿ ದೆಸೆಯಲ್ಲೇ ಬಲ್ಲೆ. ಬೆಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಅವರು ನನ್ನ ವಿದ್ಯಾ ಗುರುಗಳಾಗಿದ್ದರು. ನಾನು ಅವರ ಪ್ರೀತಿಯ ಶಿಷ್ಯನಾಗಿದ್ದೆ. ತರಗತಿಯಲ್ಲಿ ಅವರು ಬೋಧನೆಗೆ ನಿಂತರೆ, ಅಸ್ಖಲಿತವಾಣಿ, ವಿವರಣೆ, ವಿಚಾರಗಳ ಶುಭ್ರತೆ, ಶಕ್ತಿಪೂರ್ಣ ನಿರೂಪಣೆ, ಸ್ಪಷ್ಟತೆ, ಹಾಸ್ಯದ ಹೊನಲು ಇವುಗಳಿಂದ ವಿದ್ಯಾರ್ಥಿಗಳಲ್ಲಿ ಹೊಸ ಜೀವಕಳೆಯನ್ನು ತುಂಬುತ್ತಿದ್ದರು. ಪಂಪ, ರನ್ನ, ರಾಘುವಾಂಕ ಮತ್ತಿತರ ಕವಿ ಪುಂಗವರ ಸಾಹಿತ್ಯದ ಸನ್ನಿವೇಶಗಳನ್ನು ಅರ್ಥಪೂರ್ಣವಾಗಿ ಮನಮುಟ್ಟುವಂತೆ ವಿವರಿಸುತ್ತಿದ್ದರು. ಪಾಠದ ಪಾತ್ರಧಾರಿಗಳು ಇವರೇ ಆಗಿರುತ್ತಿದ್ದುದರಿಂದ ವಿದ್ಯಾರ್ಥಿಗಳ ಹೃನ್ಮನ ಸೆಳೆದಿದ್ದರು. ವಿದ್ಯಾರ್ಥಿಗಳ ಭಾವುಕ ಹೃದಯದಲ್ಲಿ ಆತ್ಮೀಯ ಸ್ಥಾನವನ್ನು ಪಡೆಯುವಲ್ಲಿ ಯಶಸ್ವಿಯಾದ ಮೇಷ್ಟ್ರು ಶ್ರೀ ಹಂಪನಾರವರು. ಆದರ್ಶ ಪ್ರಾಧ್ಯಾಪಕರಾಗಿ ಬೆಳೆದು ಇಂದು ಜನಪ್ರಿಯ ವಿದ್ವಾಂಸರೆನಿಸಿಕೊಳ್ಳುವ ವರೆಗೆ ಅವರ ಬೆಳವಣಿಗೆಯನ್ನು ನಾನು ಕಂಡಿದ್ದೇನೆ.

ನನ್ನ ಪೂಜ್ಯ ತಂದೆಯವರ ಕಾಲದಿಂದಲೂ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ನಡೆಯುವ ಸರ್ವಧರ್ಮ ಸಮ್ಮೇಳನದಲ್ಲಿ ತಮ್ಮ ವಿದ್ವತ್ಪೂರ್ಣ ಭಾಷಣಗಳಿಂದ ಗಮನ ಸೆಳೆಯುತ್ತಿದ್ದ ಅವರ ಪಾಂಡಿತ್ಯವನ್ನು ಗಮನಿಸಿದ್ದೇನೆ. ಅವರ ಉಪನ್ಯಾಸದ ಸರಣಿ ಮೃಧು ಮಧುರ. ಅವರ ನಾಲಗೆಯ ಮೇಲೆ ವಾಗ್ದೇವಿ ನರ್ತಿಸುತ್ತಿದ್ದಾಳೆ. ಮಾತಾಡುವಾಗ ಹೊರಡುವ ಸ್ಫುಟವಾದ ವಾಕ್ಯಗಳು, ವ್ಯವಸ್ಥಿತವಾದ ವಿಷಯ ನಿರೂಪಣೆ, ಬರೆದಿಟ್ಟುಕೊಳ್ಳುವಂತೆ ಅತ್ಯಂತ ಬೆಲೆಯುಳ್ಳ ನುಡಿಮುತ್ತುಗಳಾಗುತ್ತಿದ್ದುವು. ಇವರ ಭಾಷಣವೆಂದರೆ ಕೇಳುವವರಿಗೆ ಬೇಸರವಾಗುವುದಿಲ್ಲ. ಹೃದಯಕ್ಕೆ ತಟ್ಟುವ, ಮನಮುಟ್ಟುವ ರೀತಿಯಲ್ಲಿ, ಕೇಳುವವರೂ ಧ್ವನಿಗೂಡಿಸುವಂತೆ, ತಲ್ಲೀನತೆ, ತನ್ಮಯತೆಯಲ್ಲಿ ಮಿಂದು ಮಡಿಯಾಗುವಂತೆ ತಮ್ಮ ವಾಕ್‌ಝರಿಯನ್ನು ಹರಿಸುವ ಮಾತಿನ ಮೋಡಿಗಾರ ನಮ್ಮ ಹಂಪನಾ. ಭಾಷೆಯ ಮೇಲಿನ ಪ್ರಭುತ್ವ, ಭಾಷೆಯ ಬಳಕೆಯಲ್ಲಿ ತೋರುವ ಎಚ್ಚರ, ವಿಷಯದ ಅಭಿವ್ಯಕ್ತಿ ಕಿವಿಗೆ ಹಿತಕಾರಿ. ಜಾಗತಿಕ ಸಾಹಿತ್ಯದ ಆಳವಾದ ಅಭ್ಯಾಸ. ಪಾಂಡಿತ್ಯಗಳೊಂದಿಗೆ ಯಾವ ವಿಷಯದ ಮೇಲಾಗಲೀ ಬಹು ಸ್ವಾರಸ್ಯವಾಗಿ

ಮಾತಾಡಿ ಸಭಿಕರ ಹೃದಯ ಗೆಲ್ಲುತ್ತಿದ್ದರು. ಸಂಸ್ಕೃತ, ಪ್ರಾಕೃತ, ಇಂಗ್ಲಿಷ್, ಕನ್ನಡ ಭಾಷೆಗಳಲ್ಲಿ ಅವರಿಗಿದ್ದ ಹಿಡಿತ ಈ ಬಗೆಯ ಭಾಷಣಗಳಲ್ಲಿ ಚೆನ್ನಾಗಿ ಪ್ರಕಟವಾಗುತ್ತದೆ. ಅವರೊಬ್ಬ ರಸಿಕ ಕವಿ. "ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ" ಎಂಬ ಸರ್ವಜ್ಞನ ಮಾತು ಇವರಿಗೆ ಒಪ್ಪುತ್ತದೆ. ಉತ್ತಮ ಬರಹಗಾರರೂ ಆದ ಹಂಪನಾರವರು ತನ್ನ ವಿಶಿಷ್ಟತೆಯನ್ನು ಆಳವಾದ ರಸಗ್ರಹಣ ಸಾಮರ್ಥ್ಯವನ್ನು, ಗಾಢವಾದ ಸಂಶೋಧನಾ ಶೀಲತೆಯನ್ನು, ನಿಶ್ಚಿತವಾದ ವಿಮರ್ಶಾಪ್ರಜ್ಞೆಯನ್ನು ಹಾಗೂ ಆಕರ್ಷಕವಾದ ಮತ್ತು ಸತ್ಯಶೀಲವಾದ ಸೃಜನ ಶಕ್ತಿಯನ್ನು ತಮ್ಮ ಸುಮಾರು 40 ಕ್ಕೂ ಮಿಕ್ಕಿದ ಕೃತಿಗಳ ಮೂಲಕ, ಸಾವಿರಾರು ಉಪನ್ಯಾಸಗಳ ಮೂಲಕ ಸಾದರ ಪಡಿಸಿದ್ದಾರೆ. ಗ್ರಂಥ ಸಂಪಾದನೆ, ಸಂಶೋಧನೆ, ಕಾದಂಬರಿ, ಪ್ರಬಂಧ ವಿಮರ್ಶೆ, ಜೀವನ ಚರಿತ್ರೆ, ಜಾನಪದ, ಅನುವಾದ, ಭಾಷಾ ವಿಜ್ಞಾನ– ಈ ಎಲ್ಲ ಕ್ಷೇತ್ರದಲ್ಲೂ ಪರಿಪಕ್ವ ಕೃತಿಗಳನ್ನು ಕೊಟ್ಟು ಕೃತ್ಯರಾಗಿರುವ "ನಾಡೋಜ" ಶ್ರೀ ಹಂಪನಾರವರು.

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಅವಧಿಯಲ್ಲಿ (1978–1986) ಮಹತ್ವಪೂರ್ಣ ಕೆಲಸವನ್ನು ಮಾಡಿದರು. ನಾಡಿನುದ್ದಗಲಕ್ಕೂ ಸಂಚರಿಸಿ ಕನ್ನಡವನ್ನು ಉಳಿಸಿದರು, ಬೆಳೆಸಿದರು. ಭಾಷಾ ಸಮಸ್ಯೆ, ಗಡಿ ಸಮಸ್ಯೆ, ನೆರೆಯ ರಾಜ್ಯಗಳ ಜನತೆಯಿಂದ ಕನ್ನಡಿಗರಿಗಾಗುವ ಅನ್ಯಾಯಗಳನ್ನು ಕುರಿತಂತೆ ತಮ್ಮ ಭಾಷಣಗಳ ಮೂಲಕ ಜಾಗೃತಿಯ ಗಂಟೆಯನ್ನು ಬಾರಿಸಿ ಕನ್ನಡಿಗರನ್ನು ಎಚ್ಚರಿಸಿದ್ದಾರೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿ, ಎಲ್ಲ ಕನ್ನಡಿಗರನ್ನು ಒಂದುಗೂಡಿಸಿ ಜಾಗೃತಿ ಮೂಡಿಸಿದ್ದಾರೆ. 1978 ರಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ನಡೆದ 43 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು, ಪ್ರಸಿದ್ಧ ಕವಿ–ಚಿಂತಕ ಗೋಪಾಲಕೃಷ್ಣ ಅಡಿಗರು. ಅತ್ಯಂತ ಯಶಸ್ವಿಯಾದ ಈ ಸಮ್ಮೇಳನ ಹಂಪನಾರವರ ಅವಧಿಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಶ್ರೀ ಹಂಪನಾರವರ ಕತೃತ್ವಶಕ್ತಿಯನ್ನು ನಾನು ಕಂಡಿದ್ದೇನೆ, ಮೆಚ್ಚಿದ್ದೇನೆ. ಸಾಕಷ್ಟು ಕಾಲ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಹಂಪನಾ ಅವರು ಅದನ್ನು ಬೆಳೆಸಿದ ರೀತಿ ಅನನ್ಯವಾದುದು. ಅಪೂರ್ವವಾದ ಕೆಲವು ಆಯಾಮಗಳನ್ನು ಅವರು ಪರಿಷತ್ತಿಗೆ ತಂದುಕೊಟ್ಟಿದ್ದಾರೆ. ಅದು ನಾಡಿನೆಲ್ಲೆಡೆ ಮನೆಮಾತಾಗುವಂತೆ ಮಾಡಿದರು. ನಾಡು–ನುಡಿಗಳಿಗೆ ಅದರಿಂದ ವಿಶೇಷ ಲಾಭವಾಗುವಂತೆ ನೋಡಿಕೊಂಡರು. ತನ್ನ ಅಧಿಕಾರವನ್ನು ಆ ದಿಶೆಯಲ್ಲಿ ನಿರ್ವಹಿಸಿದರು. ಸಾಹಿತ್ಯ

ಜನಸಾಮಾನ್ಯರನ್ನು ತಲುಪುವಂತೆ ಮಾಡಿದರು. ಪರಿಷತ್ತಿನ ಒಳಗೂ ಹೊರಗೂ ಸಾಹಿತ್ತಿಕ ಚಟುವಟಿಕೆಗಳು ರಭಸವಾಗಿ ನಡೆಯಲು ಪ್ರೇರಕರಾದರು. ಉಪನ್ಯಾಸ, ಸಂಶೋಧನೆ, ಗ್ರಂಥ ಪ್ರಕಟಣೆ ಇತ್ಯಾದಿಗಳಲ್ಲಿ ಮಹತ್ವಪೂರ್ಣ ದಾಖಲೆಗಳನ್ನು ಸ್ಥಾಪಿಸುವ ಮೂಲಕ ಉನ್ನತ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಗೊಳಿಸಿದರು. ಜೊತೆಗೆ ಅನೇಕ ತರುಣ ಬರಹಗಾರರನ್ನು ಬೆಳಕಿಗೆ ತಂದು ಪ್ರೋತ್ಸಾಹಿಸಿದರು. ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ಸುವರ್ಣ ಅಧ್ಯಾಯವನ್ನು ಬರೆದ ಕನ್ನಡದ ಕಟ್ಟಾಳು ಹಂಪನಾರವರು.

"ದೇಶ ತಿರುಗಿ ನೋಡು, ಕೋಶ ಓದಿ ನೋಡು" ಎಂಬ ಮಾತುಗಳು ಹಂಪನಾರಿಗೆ ಹೇಳಿಸಿದಂತಿವೆ. ಕನ್ಯಾಕುಮಾರಿಯಿಂದ ಹಿಮಾಚಲದ ವರೆಗೆ, ಕೆನಡಾ, ಅಮೇರಿಕಾ, ಇಂಗ್ಲೆಂಡ್ ಮೊದಲಾದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ, ಕೊಲ್ಲಿ ದೇಶಗಳಲ್ಲಿ ಸಂಚರಿಸಿ ವಿದ್ವತ್ಪೂರ್ಣ ಉಪನ್ಯಾಸಗಳನ್ನು ನೀಡಿದ್ದಾರೆ. ನಾಡಿನ ಮೂಲೆ ಮೂಲೆಗಳಲ್ಲಿ ಸುತ್ತಿ ಉಪನ್ಯಾಸ ನೀಡಿ, ಹಿರಿಯ–ಕಿರಿಯ ಸಾಹಿತಿಗಳ, ಸಾರ್ವಜನಿಕರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದಾರೆ. ಪ್ರಾಚೀನ ಅರ್ವಾಚೀನ ಸಾಹಿತ್ಯವನ್ನು ಆಮೂಲಾಗ್ರವಾಗಿ ವ್ಯಾಸಂಗ ಮಾಡು ಜ್ಞಾನಕೋಶವನ್ನು ಸಮೃದ್ಧಿಗೊಳಿಸಿಕೊಂಡಿದ್ದಾರೆ. ಎಲ್ಲ ಮಠಾಧೀಶರ, ತ್ಯಾಗಿಗಳಂ ಮುನಿಗಳ ಆಶೀರ್ವಾದಕ್ಕೆ ಪಾತ್ರರಾದ ಶ್ರೀಯುತರು ಶ್ರವಣಬೆಳಗೊಳ, ಧರ್ಮಸ್ಥಳ, ಕಾರ್ಕಳ, ವೇಣೂರು ಇಲ್ಲಿ ನಡೆದ ಭಗವಾನ್ ಬಾಹುಬಲಿ ಮಸ್ತಕಾಭಿಷೇಕದ ವೀಕ್ಷಕ ವಿವರಣೆ ನೀಡಿ ಜನಮನ್ನಣೆಗೆ ಪಾತ್ರರಾಗಿದ್ದಾರೆ. ಡಾ. ಕಮಲಾ ಹಂಪನಾರವರು ಪತಿಗೆ ಸರಿಯಾದ ವಿದ್ವಾಂಸರು. ಇಬ್ಬರೂ ಉದ್ದಾಮ ಸಾಹಿತಿಗಳು. ಪರಸ್ಪರ ಅರಿವು, ಆತ್ಮೀಯತೆ, ಗೌರವ ಭಾವನೆಗಳು ಇರುವುದರಿಂದಲೇ ಜೀವನದ ವಿವಿಧ ಮಜಲುಗಳಲ್ಲಿ ನಾಮುಂದೆ ತಾಮುಂದೆ ಎಂದು ಆರೋಗ್ಯಕರ ಸ್ಪರ್ಧೆ ನಡೆಸುತ್ತಾ, ಪರಸ್ಪರ ಗೌರವಿಸುತ್ತಾ ಬಂದವರು ಈ ಆದರ್ಶ ದಂಪತಿಗಳು. ಜೀವನದ ನೋವು–ನಲಿವು, ಸೋಲು ಗೆಲುವುಗಳನ್ನು ಸಮನ್ವಯಗೊಳಿಸುವಲ್ಲಿ ಅವರ ಹಾಸ್ಯ ಪ್ರವೃತ್ತಿಯು ಮಹತ್ವದ ಪಾತ್ರವಹಿಸಿದೆ. ನಿಜದ ಅರ್ಥದಲ್ಲಿ ಇವರಿಬ್ಬರೂ ಇಂದಿನ ಮುದ್ದಣ ಮನೋರಮೆಯರು. ಕಮಲಾ ಹಂಪನಾರು ಮೂಡುಬಿದ್ರಿಯಲ್ಲಿ ನಡೆದ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದು ಯಶಸ್ವಿ ಕಾರ್ಯಭಾರವನ್ನು ನಿರ್ವಹಿಸಿದ್ದನ್ನು ಈ ಸಂದರ್ಭದಲ್ಲಿ ನೆನೆಯಬಹುದು.

ಆದಿಕವಿ ನಾಡೋಜ ಪಂಪನಿಂದ ಹಂಪನಾ ವರೆಗೆ ಬೆಳೆದು ಬಂದ ಕನ್ನಡ ಸಾಹಿತ್ಯ ಎನ್ನುತ್ತಾರೆ ನಾಡೋಜ ಹಂಪನಾ ಅಭಿಮಾನಿಗಳು. ಹಂಪನಾ ಇದ್ದಕಡೆ ಜನ. ಆಬಾಲವೃದ್ಧರಾಗಿ ಬೆಲ್ಲಕ್ಕೆ ಇರುವೆ ಮುತ್ತುವಂತೆ ಸೇರುತ್ತಾರೆ. ತರುಣರೊಂದಿಗೆ ತರುಣರಾಗಿ, ಮುಪ್ಪಿನವರೊಂದಿಗೆ ಮುದುಕರಾಗಿ, ಹಾಲಲ್ಲಿ ಸಕ್ಕರೆಯಂತೆ ಬೆರೆಯುತ್ತಾರೆ. ಅವರು ಪ್ರಾಧ್ಯಪಕರಾಗಿ ಬೆಳೆದು ಇಂದು ವಿದ್ವಾಂಸರೆನಿಸಿಕೊಳ್ಳುವ ವರೆಗಿನ ಬೆಳವಣಿಗೆಯನ್ನು ನಾನು ಕಂಡಿದ್ದೇನೆ. ವೃತ್ತಿಯಿಂದ ಪ್ರಾಧ್ಯಾಪಕರಾಗಿ ಅದಕ್ಕೆ ಪೂರಕವಾಗಿ ಸಂಶೋಧನಾ ಆಸಕ್ತಿಯನ್ನು ಆವಾಹಿಸಿಕೊಂಡು, ಕನ್ನಡ ಶಕ್ತಿ ಶಾರದೆಯ ಕೈಂಕರ್ಯದ ಫಲವಾಗಿ ಏರಿದ ಎತ್ತರ, ಮುಟ್ಟಿದ ಗುರಿ, ಮಾಡಿದ ಸಾಧನೆ ಅವರ ಹೋರಾಟದ ಬದುಕಿನ ವೀರಗಾಥೆಗಳು. ಸದಾ ತಾರುಣ್ಯದ ಉತ್ಸಾಹ ಲವಲವಿಕೆಗಳನ್ನು ದೈಹಿಕ ವ್ಯಕ್ತಿತ್ವವನ್ನು ಒಂದೇ ರೀತಿಯಲ್ಲಿ ರಕ್ಷಿಸಿಕೊಂಡು ಬಂದು ಎಪ್ಪತ್ತನಾಲ್ಕರ ಪ್ರಾಯದಲ್ಲಿ ಇಪ್ಪತ್ತರ ಯುವಕನಂತೆ ಉಲ್ಲಾಸದಿಂದಿರುವ ಹಂಪನಾರವರು ಹೀಗೇನೆ ಆರೋಗ್ಯಪೂರ್ಣವಾಗಿ ಇನ್ನಷ್ಟುಕಾಲ ಬಾಳಲಿ. ಅವರಿದ ಇನ್ನಷ್ಟು ಸಾಹಿತ್ಯದ ಕೆಲಸಗಳು ಆಗಲಿ – ಎಂದು ಹಾರೈಸೋಣ. ಅವರಲ್ಲಿರುವ ಸರಳತೆ, ಸಜ್ಜನಿಕೆ, ಸತ್ಸಂಗ, ಮೆಲ್ಮಾತು, ಸತ್ಯಂಗ ಸಲ್ಲಾಪಗಳು, ಅಸ್ಖಲಿತ ವಾಗ್ಮಿತೆಗಳು ಚಿರಂತನವಾಗಿ ಉಳಿಯಲಿ. ಕ್ರಿಯಾಶೀಲತೆ, ಸಾಹಿತ್ಯ ನಿರ್ಮಿತಿ ಮತ್ತು ವಾಗ್ಮಿತೆಗಳ ತ್ರಿವೇಣಿ ಸಂಗಮವಾಗಿರುವ ಹಂಪನಾರವರು ಒಂದು ಅಪೂರ್ವ ರಸಾನುಭವ. ಉತ್ಸಾಹದ ಚಿಲುಮೆ. ಬದುಕಿನಲ್ಲಿ ಯಶಸ್ಸಿಗೆ ನೈಪುಣ್ಯವೊಂದೇ ಸಾಲದು, ಪುಣ್ಯವೂ ಬೇಕು. ಅವೆರಡನ್ನೂ ಪಡೆದು ಧನ್ಯರಾದವರು ನಮ್ಮ ಹಂಪನಾರವರು. ಸದಾ ಲವಲವಿಕೆಯಲ್ಲಿರುವ "ಸಫಾರಿಧಾರಿ" ನಾಡೋಜ ಹಂಪನಾರವರು ಪಂಪನಂತೆಯೇ ಕೀರ್ತಿವಂತರಾಗಲಿ ಎಂದು ತುಂಬು ಮನಸ್ಸಿನಿಂದ ಹಾರೈಸುತ್ತೇನೆ.

**ಡಿ. ವೀರೇಂದ್ರ ಹೆಗ್ಗಡೆಯವರು.**